

ಮೂರು ಪಾಲು ಮನೆಗಳಲ್ಲಿ ಆ ವರ್ಷ ಹಬ್ಬವಿರಲಿಲ್ಲ. ಮನೆಮನೆಯಲ್ಲಿ ತಂದೆಯೊ, ಮಗನೊ, ಜೊತೆ ಹುಟ್ಟಿದವನೊ, ಅಳಿಯನೋ ಯಾರೋ ಒಬ್ಬರು ಸೆರೆಮನೆಯ ಕ್ಲೇಶವನ್ನನುಭವಿಸುತ್ತಿರುವಾಗ ಹಬ್ಬದ ಮೇಲೆ ಅಕ್ಕರೆ ಯಾರಿಗೆ?

ರುಕ್ಮಿಣಿಯ ಅತ್ತೆಮನೆಯಲ್ಲಿ ವರುಷಗಳಿಂದಲೂ ಸಾವಿತ್ರಿ ಗೌರಿಯನ್ನು ಕೂರಿಸುವುದು ರೂಢಿ. ‘ನಿನಗೆ ಕಷ್ಟವಾದರೆ ಈ ವರ್ಷವೂ ಅಮ್ಮನವರನ್ನು ಕೂರಿಸಿ ವ್ರತ ಮಾಡಿಕೊಳ್ಳಮ್ಮ. ಅಮ್ಮನವರ ವ್ರತ ಬಿಡುವುದೇಕೆ?’ ಅಂದಳು ರುಕ್ಮಿಣಿಯೊಂದಿಗೆ ಅವಳ ಅತ್ತೆ. ಗಂಡನಿಗೆ ಶುಭತರುವ ಆ ವ್ರತವನ್ನು ಜರುಗಿಸಲು ರುಕ್ಮಿಣಿಗೂ ಕೂಡ ಕುತೂಹಲವುಂಟಾಯಿತು. ಆದರೆ ಸಾವಿತ್ರಿಗೌರಿ ವ್ರತವನ್ನು ಒಬ್ಬರು ಮಾಡುವಂತಹುದಲ್ಲವಲ್ಲ. ಅನೇಕ ಮಂದಿ ಕೂಡಿ ಮಾಡಿಕೊಳ್ಳಬೇಕು. ತಮ್ಮ ಮನೆಯಲ್ಲಿ ಸಾವಿತ್ರಿಗೌರಿಯನ್ನು ಕೂರಿಸಿದೆವೆಂದು ತಿಳಿದುದಾದರೆ ಈ ವರ್ಷವೂ ಹೆಚ್ಚಿನ ಮಂದಿ ಯುವತಿಯರು ಬಂದು ವ್ರತ ಆಚರಿಸುವರೆಂದು ಅವಳಿಗೆ ಗೊತ್ತು. ಆದರೆ ಅವರು ಮುನ್ನಿನಂತೆ ವಿದೇಶಿ ವಸ್ತ್ರಗಳನ್ನು ಧರಿಸಿ ಬಂದು ವ್ರತವನಾಚರಿಸಿದರೆ ತಾನು ಪತಿಗೆ ಹಿತವಾದ ವ್ರತವನ್ನೇ ಆಚರಿಸಿದಂತೆ ಹೇಗಾಗುವುದು? ರುಕ್ಮಿಣಿ ಉಂಟಾದ ಈ ಆಲೋಚನೆಯನ್ನು ಹೀಗೆ ವ್ಯಕ್ತಪಡಿಸಿದಳು, ‘ಈ ವರ್ಷ ನಮ್ಮ ಮನೆಯಲ್ಲಿ ವ್ರತ ಆಚರಿಸುವವರು ಖದ್ದರು ವಸ್ತ್ರಗಳನ್ನು ಧರಿಸಿಯೇ ಆಚರಿಸಿಕೊಳ್ಳಬೇಕು’ ಎಂದು ವ್ರತಾಚರಣೆ ಮಾಡಲಿಚ್ಛಿಸುವವರಿಗೆ ಸುದ್ದಿ ಕಳುಹಿಸಿದಳು. ಇದಕ್ಕೆ ಬದ್ಧರಾಗದಿದ್ದುದರಿಂದ ರುಕ್ಮಿಣಿಯ ಮನೆಯಲ್ಲಿ ವ್ರತ ಆಚರಿಸುವವರು ಕೆಲವರೇ ಆದರು. ರುಕ್ಮಿಣಿ ನಿರುತ್ಸಾಹಿಯಾಗಲಿಲ್ಲ. ಆ ಕೆಲವರೊಂದಿಗೆ ಸಾವಿತ್ರಿ ಗೌರಿ ವ್ರತವನಾರಂಭಿಸಿದಳು.

## 10

ಸಾವಿತ್ರಿಗೌರಿಯನ್ನು ಕೂರಿಸಿ ಇಂದಿಗೆ ಎಂಟು ದಿನಗಳು. ಸಾವಿತ್ರಿ ಪೂಜೆಯಲ್ಲಿ